Reg. No. | | | | | | | | | |

# BSCKAL 153/FNDKAL 153/HRDKAL 153

**Credit Based II Semester B.Sc./B.Sc. (FND)/B.A. (HRD)**
**Examination, April/May 2017**
**(Common to all Batches)**
**KANNADA**
**Kannada Language – II**

ಅವಧಿ : 3 ಗಂಟೆಗಳು ಗರಿಷ್ಠಾಂಕಗಳು : 80

Shri Dharmasthala Manjunatheshwara
College of Business Management Library
MANGALORE - 575 003

## ಭಾಗ – 1

## ಕಾವ್ಯ

I. ಅ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿ : **(1×8=8)**

1) ಭೀಷ್ಮರ ಪಟ್ಟಾಭಿಷೇಕದ ಸಂದರ್ಭದಲ್ಲಿ ಕರ್ಣ – ದ್ರೋಣ ಮತ್ತು ಭೀಷ್ಮರ ನಡುವೆ ನಡೆದ ಸಂವಾದವನ್ನು ವಿವರಿಸಿ.

2) ಶ್ರೇಣೀಕೃತ ಸಮಾಜದ ತಾರತಮ್ಯ ವ್ಯವಸ್ಥೆಯ ಕುರಿತು 'ಬಡತನದ ಬಡಬಾಗ್ನಿ' ಕವನದಲ್ಲಿ ಕವಿ ಹೇಗೆ ವಿಡಂಬಿಸಿದ್ದಾರೆ ? ವಿವರಿಸಿ.

ಆ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(1×5=5)**

1) 'ಅಮೃತ ಮುಹೂರ್ತ' ಕವನದಲ್ಲಿ ಅಕ್ಕಮಹಾದೇವಿಯ ಬದುಕಿನ ಚಿತ್ರಣವು ಹೇಗೆ ಮೂಡಿಬಂದಿದೆ ?

2) ಕುಂತಿಯ ಬಡತನದ ದಾರುಣತೆಯು ಜನಪದ ಗೀತೆಯಲ್ಲಿ ಹೇಗೆ ಚಿತ್ರಣಗೊಂಡಿದೆ ?

ಇ) ಕೆಳಗಿನ ಎರಡಕ್ಕೆ ಟಿಪ್ಪಣಿ ಬರೆಯಿರಿ : **(2×3=6)**

1) ಜಿ.ಎಸ್. ಶಿವರುದ್ರಪ್ಪ

2) ಪುರಂದರದಾಸರ ಋಣದ ಪರಿಕಲ್ಪನೆ

3) ಚೆನ್ನಣ್ಣ ವಾಲೀಕಾರ.

II. ಅ) ಕೆಳಗಿನ ಒಂದು ಪದ್ಯಭಾಗದ ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವೇಚಿಸಿರಿ : **(1×5=5)**

1) ನರನಾರಾಯಣರಿರ್ವರೆ
ಧುರದೊಳ್ ಮಾರ್ಕೊಳ್ವರೆನ್ನನೊರ್ವಂ ಮೊಮ್ಮಂ
ಪರಮಗುರುವೊರ್ವನವರಿ
[illegible]

2) ಇಲ್ಲಿದ್ದರಂತೆ ಕಲ್ಲಲ್ಲಿ ರುಜುವಿಟ್ಟವರು
ಕಾಡುಕೋಣನ ಬೇಟೆಯಾಡಿದವರು
ಬೆಳೆದುಗುರಿನಿಂದ ಹಾವಿನ ಹುತ್ತ ಬಗೆದವರು,
ಎತ್ತರದ ಹದ್ದುಗಳ ಕೆಡಹಿದವರು

ಆ) ಕೆಳಗಿನ **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿರಿ : **(2×3=6)**

1) ಇದೇಂ ದಾಯಿಗತನಮನೆಮಗವರ್ ತೋರಿದಪರ್

2) ರಕ್ತಾಂಜಲಿಯನಿತ್ತು, ರಣರಂಗದಲಿ ಸತ್ತು
ಅಮರನಾಗುವ ಕಾಲ ಇಲ್ಲವಿಂದು

3) ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ
ಚೆಲುವಂಗೊಲಿದವಳು.

III. ಕೆಳಗಿನ **ಪ್ರತಿಯೊಂದು** ಪ್ರಶ್ನೆಗಳಿಗೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : **(5×1=5)**

1) ಗಂಗಾಸುತ ಎಂದರೆ ಯಾರು ?

2) ಪುರಂದರದಾಸರ ಮೂಲ ಹೆಸರೇನು ?

3) ವ್ಯೋಮಕೇಶ ಎಂದು ಯಾರನ್ನು ಕರೆಯುತ್ತಾರೆ ?

4) ಚಂದ್ರಶೇಖರ ಪಾಟೀಲರ ಹುಟ್ಟೂರು ಯಾವುದು ?

5) ಕೊಂತಿಯ ಪೂಜೆ ಹಾಡುಗಳನ್ನು ಯಾರು ಹಾಡುತ್ತಾರೆ ?

## ಭಾಗ – 2

## ಗದ್ಯ

IV. ಅ) ಕೆಳಗಿನ **ಒಂದು** ಪ್ರಶ್ನೆಗೆ ಉತ್ತರಿಸಿ : **(1×8=8)**

1) 'ಮೂಲಿಕೆ ಬಳ್ಳಿ' ಲೇಖನದಲ್ಲಿ ಜನಪದ ವೈದ್ಯಕೀಯದ ಸಮಸ್ಯೆ ಹೇಗೆ ಅನಾವರಣಗೊಂಡಿದೆ ? ವಿವೇಚಿಸಿ.

2) ಎಲ್ಲಾ ಕಾಲ ಮತ್ತು ದೇಶಗಳಿಗೆ ಅನ್ವಯವಾಗುವ ಅಸೂಯೆ, ಕರುಣೆ ಮತ್ತು ಪ್ರೇಮದ ಎಳೆಗಳು 'ಸ್ನೋ ವೈಟ್' ಕಥೆಯಲ್ಲಿ ಹೇಗೆ ಬಿಂಬಿತವಾಗಿದೆ ?

ಆ) ಕೆಳಗಿನ **ಒಂದು** ಪ್ರಶ್ನೆಗೆ ಉತ್ತರಿಸಿ : **(1×8=8)**

1) ಭಾರತ ಮತ್ತು ದಕ್ಷಿಣ ಆಫ್ರಿಕಾದ ಅಸ್ಪೃಶ್ಯತೆಯ ಕುರಿತು ದೇವನೂರು ಮಹಾದೇವರ ಅಭಿಪ್ರಾಯಗಳನ್ನು ತಿಳಿಸಿ.

2) ಮಾನವನ ಬದುಕನ್ನು ಬದಲಿಸುವ ನಿಟ್ಟಿನಲ್ಲಿ ವಿಜ್ಞಾನ ಮತ್ತು ಸಾಹಿತ್ಯದ ಪಾತ್ರದ ಬಗ್ಗೆ ಲೇಖಕಿಯ ಅಭಿಪ್ರಾಯವನ್ನು ವಿವೇಚಿಸಿ.

V. ಕೆಳಗಿನ **ಒಂದು** ಪ್ರಶ್ನೆಗೆ ಉತ್ತರಿಸಿ : (1×5=5)

1) ಭೂಮಿ ಸಮಸ್ಯೆ ಕುರಿತು 'ಯಾಕೀಗ ಭೂಮಿ ಪ್ರಶ್ನೆ' ಲೇಖನದಲ್ಲಿ ಮೂಡಿಬಂದ ವಿಚಾರಗಳನ್ನು ವಿವರಿಸಿ.

2) 'ವಿಜ್ಞಾನ ಪ್ರಶ್ನೆ' ಲೇಖನದಲ್ಲಿ ವೈಜ್ಞಾನಿಕ ಕ್ಷೇತ್ರದಲ್ಲಿ ಇರುವ ವೈರುಧ್ಯಗಳ ಕುರಿತು ಲೇಖಕರ ಅಭಿಪ್ರಾಯವನ್ನು ತಿಳಿಸಿರಿ.

VI. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : (4×1=4)

1) ತೇಜಸ್ವಿಯವರ ಆತ್ಮಚರಿತ್ರೆ ಯಾವುದು ?

2) ಬಿ.ಎ. ವಿವೇಕ ರೈಯವರಿಗೆ ಸಿನ್ಹರವರು ಮೊದಲು ಪರಿಚಯವಾದದ್ದು ಎಲ್ಲಿ ?

3) ಭೂಮಿ ಸೂರ್ಯನ ಸುತ್ತ ಸುತ್ತುವುದೆನ್ನುವ ವಿಚಾರವನ್ನು ಮೊದಲು ಮಂಡಿಸಿದವರು ಯಾರು ?

4) ಜೀವ ಪರಿಸರ ಚಳವಳಿಗೆ ಇಂಗ್ಲಿಷ್‌ನಲ್ಲಿ ಏನೆಂದು ಕರೆಯುತ್ತಾರೆ ?

## ಭಾಗ – 3

Shri Dharmasthala Manjunatheshwara College of Business Management Library MANGALORE - 575 003

### ನಾಟಕ

VII. ಅ) ಕೆಳಗಿನ **ಒಂದು** ಪ್ರಶ್ನೆಗೆ ಉತ್ತರಿಸಿ : (1×8=8)

1) ನಾರಾಣ ದೇವರು ತುಳುನಾಡಿಗೆ ಬಂದ ಸಂದರ್ಭವು ನಾಟಕ ಭಾಗದಲ್ಲಿ ಹೇಗೆ ಮೂಡಿಬಂದಿದೆ ? ವಿಶ್ಲೇಷಿಸಿ.

2) ನಾಟಕದಲ್ಲಿ ತುಳುನಾಡಿನ ಸಂಸ್ಕೃತಿಯ ವಿವರಗಳು ಹೇಗೆ ಚಿತ್ರಣಗೊಂಡಿದೆ ? ವಿವರಿಸಿ.

ಆ) ಕೆಳಗಿನ **ಒಂದು** ಪ್ರಶ್ನೆಗೆ ಉತ್ತರಿಸಿ : (1×6=6)

1) ಅಣ್ಣಪ್ಪ ಪೆರ್ಗಡೆ ತುಳುನಾಡಿನ ದೈವವಾಗಿ ನೆಲೆ ನಿಲ್ಲುವುದಕ್ಕೆ ಕಾರಣವಾದ ಸಂದರ್ಭವನ್ನು ವಿವರಿಸಿ.

2) ಶುಕ್ರಾಚಾರಿಯ ಪಾತ್ರವನ್ನು ಪರಿಚಯಿಸಿ.

VIII. ಕೆಳಗಿನ **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿ : (2×2=4)

1) ಸೃಷ್ಟಿಯ ವಿನಾಶಕ್ಕೆ ಮಕ್ಕಳೇ ಕಾರಣವಾದ್ರೆ ಅವನ್ನು ಕ್ಷಮಿಸಲಾಗದು.

2) ಓ ಸತ್ಯಪುತ್ರನೇ, ನಾನು ಕೇವಲ ಚಾಕರಿಯ ಆಳು.

3) ನನ್ನ ನಾಡು ಸತ್ತಿಗೆಯಷ್ಟು ಚಂದ, ಚಿನ್ನದ ನಾಣ್ಯದಷ್ಟು ಸುಂದರ.

IX. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : (2×1=2)

1) ಡಿ.ಕೆ. ಚೌಟರ ಕಾವ್ಯನಾಮ ಯಾವುದು ?

2) ನಾಟಕದಲ್ಲಿ ಕಾಣಿಸಿಕೊಳ್ಳುವ ಹೆಣ್ಣು ಹಂದಿಯ ಹೆಸರೇನು ?